# <u>ಕರ್ನಾಟಕ ವಿಧಾನ ಪರಿಷತ್ತು</u>

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿನ (ಶಾಸಕರ ಭವನವೂ ಸೇರಿದಂತೆ) ಗಣಕ ಯಂತ್ರಗಳ ಮತ್ತು ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಯ ಸಂಬಂಧ ಹಣ ಪಾವತಿಸುವ ಬಗ್ಗೆ.

*****

<u>ಓದಲಾಗಿದೆ:</u> 1. ಕರಾರು ಒಪ್ಪಂದ ಪತ್ರ ದಿನಾಂಕ: 15.04.2025

2. ಮೆ:ಸುಮುಖ ಆಫೀಸ್ ಸಲ್ಯೂಷನ್ಸ್, ಬೆಂಗಳೂರು, ಇವರ Invoice No.S25-26/BLR0530, ದಿನಾಂಕ: 16.01.2026.

3.ಕಡತ ಸಂಖ್ಯೆ:ಕವಿಪ/ಕಾಕಾ/56/ಗಪ್ರಿ.ಎಎಂಸಿ/2024 (ಭಾಗ-3)ರ ಕಂಡಿಕೆ ಸಂಖ್ಯೆ: 01 ರಿಂದ 08 ರವರೆಗೆ.

<u>ಪ್ರಸ್ತಾವನೆ:</u>

ಓದಲಾಗಿರುವ ಕ್ರಮ ಸಂಖ್ಯೆ: (1)ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ (ಶಾಸಕರ ಭವನವೂ ಸೇರಿದಂತೆ) ಅಳವಡಿಸಲಾಗಿರುವ 157 ಗಣಕಯಂತ್ರಗಳ ಹಾಗೂ 106 ಪ್ರಿಂಟರ್‌ಗಳ ವಾರ್ಷಿಕ ಸೇವಾ ನಿರ್ವಹಣೆಗೆ ಸಂಬಂಧಿಸಿದಂತೆ ಮೆ:ಸುಮುಖ ಆಫೀಸ್ ಸಲ್ಯೂಷನ್ಸ್, ನಂ.127, 2ನೇ ಮಹಡಿ, 10ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇವರೊಂದಿಗೆ ದಿನಾಂಕ:15.04.2025 ರಿಂದ 14.04.2026 ರವರೆಗೆ ಒಂದು ವರ್ಷದ ವಾರ್ಷಿಕ ಸೇವಾ ನಿರ್ವಹಣಾ ಗುತ್ತಿಗೆಯ ಒಟ್ಟು ಮೊತ್ತ ರೂ.4,37,875/-ಗಳನ್ನು (ಜಿ.ಎಸ್.ಟಿ ಒಳಗೊಂಡಂತೆ) ನಾಲ್ಕು ಸಮಾನ ಕಂತುಗಳಲ್ಲಿ ಅಂದರೆ ಪ್ರತಿ 03 ತಿಂಗಳಗೊಮ್ಮೆ ರೂ.1,09,469/-(ಒಂದು ಲಕ್ಷದ ಒಂಬತ್ತು ಸಾವಿರದ ನಾಲ್ಕುನೂರ ಅರವತ್ತುತೊಂಬತ್ತು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಲು ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ.

ಓದಲಾಗಿರುವ ಕ್ರಮ ಸಂಖ್ಯೆ:(2)ರಲ್ಲಿ ದಿನಾಂಕ:15.10.2025 ರಿಂದ 14.01.2026ರ ಅವಧಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಶಾಸಕರ ಭವನವೂ ಸೇರಿದಂತೆ) 157 ಗಣಕ ಯಂತ್ರಗಳು ಹಾಗೂ 106 ಪ್ರಿಂಟರ್‌ಗಳ ವಾರ್ಷಿಕ ಸೇವಾ ನಿರ್ವಹಣೆ ಕೈಗೊಂಡಿರುವ ಸಂಬಂಧ ಮೆ:ಸುಮುಖ ಆಫೀಸ್ ಸಲ್ಯೂಷನ್ಸ್ ಇವರು ಜಿ.ಎಸ್.ಟಿ. ಒಳಗೊಂಡಂತೆ ಮೂರನೇ ಕಂತಿನ ಒಟ್ಟು ಬಿಲ್ಲಿನ ಮೊತ್ತ ರೂ.1,09,469/-(ಒಂದು ಲಕ್ಷದ ಒಂಬತ್ತು ಸಾವಿರದ ನಾಲ್ಕುನೂರ ಅರವತ್ತುತೊಂಬತ್ತು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸುವಂತೆ ಕೋರಿ ಬಿಲ್ಲನ್ನು ಸಲ್ಲಿಸಿರುತ್ತಾರೆ.

ಓದಲಾಗಿರುವ ಕ್ರಮ ಸಂಖ್ಯೆ:(3) ರಲ್ಲಿ ಮೆ:ಸುಮುಖ ಆಫೀಸ್ ಸಲ್ಯೂಷನ್ಸ್, ಬೆಂಗಳೂರು ಇವರು ಸಲ್ಲಿಸಿರುವ ಜಿ.ಎಸ್.ಟಿ ಒಳಗೊಂಡಂತೆ ರೂ.1,09,469/-(ಒಂದು ಲಕ್ಷದ ಒಂಬತ್ತು ಸಾವಿರದ ನಾಲ್ಕುನೂರ ಅರವತ್ತುತೊಂಬತ್ತು ರೂಪಾಯಿಗಳು ಮಾತ್ರ)ಗಳನ್ನು ಸದರಿಯವರಿಗೆ ಪಾವತಿಸುವ ಪ್ರಸ್ತಾವನೆಗೆ ಮಾನ್ಯ ಸಭಾಪತಿಯವರು ಅನುಮೋದನೆಯನ್ನು ನೀಡಿರುತ್ತಾರೆ.

**ಆದೇಶ ಸಂಖ್ಯೆ:ಕವಿಪ:ಆ-1::112:ಗಪ್ರಿಂ:ವಾನಿ:2026.**

**ಬೆಂಗಳೂರು, ದಿನಾಂಕ:09.02.2026**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ದಿನಾಂಕ: 15.10.2025 ರಿಂದ 14.01.2026ರ ಅವಧಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಶಾಸಕರ ಭವನವೂ ಸೇರಿದಂತೆ) 157 ಗಣಕ ಯಂತ್ರಗಳು ಹಾಗೂ 106 ಪ್ರಿಂಟರ್‌ಗಳ ವಾರ್ಷಿಕ ಸೇವಾ ನಿರ್ವಹಣೆ ಕೈಗೊಂಡಿರುವ ಸಂಬಂಧ ಮೆ:ಸುಮುಖ ಆಫೀಸ್ ಸಲ್ಯೂಷನ್ಸ್, ಬೆಂಗಳೂರು ಇವರಿಗೆ ಮೂರನೇ ಕಂತಿನ ಬಿಲ್ಲಿನ ಮೊತ್ತ ರೂ. 1,09,469/-(ಒಂದು ಲಕ್ಷದ ಒಂಬತ್ತು ಸಾವಿರದ ನಾಲ್ಕುನೂರ ಅರವತ್ತುತೊಂಬತ್ತು ರೂಪಾಯಿಗಳು ಮಾತ್ರ)ಗಳನ್ನು (ಜಿಎಸ್‌ಟಿ ಸೇರಿ)ಪಾವತಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

...2

Scanned with OKEN Scanner

ಈ ಬಗ್ಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2011-02-103-2-01-(051)"ರಲ್ಲಿ ಅಡಿಯಲ್ಲಿ ಭರಿಸತಕ್ಕದ್ದು.

ಮಾನ್ಯ ಸಭಾಪತಿಯವರ ಆದೇಶಾನುಸಾರ,

9/12/2016

(ಕುಷ್ತರ್ ಉನ್ನೀಸ)
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

<u>ಪ್ರತಿಗಳು:-</u>

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
3. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
4. ಕಾರ್ಯದರ್ಶಿ-2ರವರ ಆಪ್ತ ಸಹಾಯಕರಿಗೆ, ಕವಿಪ.
5. ಉಪಕಾರ್ಯದರ್ಶಿ/ಅಧೀನಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ಲೆಕ್ಕಪತ್ರಗಳ ಶಾಖೆ-2/ಕಾರ್ಯಕಾರಿ ಶಾಖೆ,ಕವಿಪ.
6. ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಗಣಕ ಕೇಂದ್ರ, ಕವಿಪ.
7. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8. **ಮೆ:ಸುಮುಖ ಆಫೀಸ್ ಸಲ್ಯೂಷನ್ಸ್, ನಂ.127, 2ನೇ ಮಹಡಿ, 10ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.**
9. ಆಂತರಿಕ ಆರ್ಥಿಕ ಸಲಹೆಗಾರರು, ಕವಿಮಂ
10. ಸೀನಿಯರ್ ಪ್ರೋಗ್ರಾಮರ್,ಗಣಕ ಶಾಖೆ,ಕವಿಪ
11. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿ.

Scanned with OKEN Scanner